ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):–

ಅ) ಕೆಶಿಪ್–2 ಯೋಜನೆಯಡಿ ಕುಣಿಗಲ್ ತಾಲ್ಲೂಕಿನ 85.60 ಕಿ.ಮೀ. ಉದ್ದದ ರಸ್ತೆ ಅಭಿವೃದ್ಧಿಯನ್ನು ಒಳಗೊಂಡಿದ್ದು ವಿವರಗಳು ಕೆಳಗಿನಂತಿವೆ.

ಲಿಂಕ್ ಸಂಖ್ಯೆ	ರಸ್ತೆ ಹೆಸರು	ತಾಲ್ಲೂಕಿನಲ್ಲಿ ಹಾದು ಹೋಗುವ ಉದ್ದ (ಕಿ.ಮೀ.)	ಅಂದಾಜು ವೆಚ್ಚ (ರೂ.ಕೊಟಿಗಳಲ್ಲಿ)
57A	ಗುಬ್ಬಿ–ಸಿ.ಎಸ್.ಪುರ–ಯಡಿಯೂರು	16.90	34
57B	ಯಡಿಯೂರು–ಅಮೃತೂರು–ಕೌಡ್ಲಿ	24.00	48
63B	ಮದ್ದೂರು–ಹುಲಿಯೂರುದುರ್ಗ	7.60	15
63C	ಹುಲಿಯೂರುದುರ್ಗ–ಕುಣಿಗಲ್	23.10	46
63D	ಕುಣಿಗಲ್–ತುಮಕೂರು	14.00	18
	ಒಟ್ಟು	85.60	161

ಆ) ಗುಬ್ಬಿ–ಯಡಿಯೂರು–ಕೌಡ್ಲಿವರೆಗಿನ 41 ಕಿ.ಮೀ. ರಸ್ತೆ ಅಭಿವೃದ್ಧಿಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು ಜನವರಿ 2012 ರಲ್ಲಿ ಎ.ಡಿ.ಬಿ. ನೆರವಿನಲ್ಲಿ ಕಾಮಗಾರಿ ಪ್ರಾರಂಭಿಸಲಾಗುವುದು.

ಮದ್ದೂರು–ಹುಲಿಯೂರುದುರ್ಗ–ಕುಣಿಗಲ್–ತುಮಕೂರುವರೆಗಿನ 45 ಕಿ.ಮೀ. ರಸ್ತೆ ಅಭಿವೃದ್ಧಿಯನ್ನು ಅನ್ಯೂಟಿ ಗುತ್ತಿಗೆ ರೂಪದಲ್ಲಿ ವಿಶ್ವಬ್ಯಾಂಕ್ ನೆರವಿನಲ್ಲಿ ಕೈಗೊಳ್ಳಲಿದ್ದು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಇ) ಸರ್ಕಾರದ ಗಮನಕ್ಕೆ ಬಂದಿದ್ದು, ಪರಿಶೀಲಿಸಲಾಗುತ್ತಿದೆ.

ಈ) ಅನುದಾನದ ಲಭ್ಯತೆ ಅನುಸಾರ ಸೂಕ್ತ ಯೋಜನೆಗಳಲ್ಲಿ ಅಳವಡಿಸಲು ಪರಿಶೀಲಿಸಲಾಗುವುದು.

M.D.R. ರಸ್ತೆಗಳು

325 (573) ಶ್ರೀ ರುದ್ರೇಶಗೌಡ ವೈ.ಎನ್. (ಬೇಲೂರು) :– ಮಾನ್ಯ ಲೋಕೋಪಯೋಗಿ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬೇಲೂರು ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ M.D.R. ರಸ್ತೆಗಳು ಎಷ್ಟು ಕಿ.ಮೀ. ಇರುತ್ತದೆ. ಅವು ಯಾವುವು;

ಆ) ಈ ರಸ್ತೆಗಳ ನಿರ್ವಹಣೆಗಾಗಿ 2011–12ನೇ ಸಾಲಿನಲ್ಲಿ ನಿಗದಿಪಡಿಸಿರುವ ಹಣ ಎಷ್ಟು ;

ಇ) ಈ ಅನುಬಂಧದಲ್ಲಿ ರಸ್ತೆಗಳ ನಿರ್ವಹಣೆ ಸಾಧ್ಯವೇ ; ಸಾಧ್ಯವಿಲ್ಲದ ಪಕ್ಷದಲ್ಲಿ ಯಾವ ಕಾರಣಕ್ಕಾಗಿ ಹೆಚ್ಚಿನ ಅನುದಾನ ನಿಗದಿ ಪಡಿಸಿರುವುದಿಲ್ಲ ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):–

ಅ) ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಹಾಸನ ಜಿಲ್ಲೆಯ ಬೇಲೂರು ವಿಧಾನಸಭಾ ಕ್ಷೇತ್ರದ ಅಡಿಯಲ್ಲಿ ಬೇಲೂರು ಹಾಗೂ ಅರಸೀಕೆರೆ ತಾಲ್ಲೂಕು ಭಾಗಗಳು ಒಳಪಡುತ್ತವೆ. ಬೇಲೂರು ತಾಲ್ಲೂಕಿನ ಅಡಿಯಲ್ಲಿ 310.10 ಕಿ.ಮೀ. ಉದ್ದದ 37 ಜಿಲ್ಲಾ ಮುಖ್ಯ ರಸ್ತೆಗಳು ಹಾಗೂ ಅರಸೀಕೆರೆ ತಾಲ್ಲೂಕಿನ ಅಡಿಯಲ್ಲಿ 106.00 ಕಿ.ಮೀ. ಉದ್ದದ 7 ಜಿಲ್ಲಾ ಮುಖ್ಯ ರಸ್ತೆಗಳು ಇದ್ದು, ರಸ್ತೆಗಳ ವಿವರ ಅನುಬಂಧ–1 ರಲ್ಲಿ ನೀಡಿದೆ.

ಆ) 2011–12ನೇ ಸಾಲಿನಲ್ಲಿ ಬೇಲೂರು ಕ್ಷೇತ್ರದಲ್ಲಿನ ಬೇಲೂರು ತಾಲ್ಲೂಕಿಗೆ ರೂ. 93.72 ಲಕ್ಷ ಹಾಗೂ ಅರಸೀಕೆರೆ ತಾಲ್ಲೂಕಿಗೆ ರೂ. 43.72 ಲಕ್ಷಗಳ ಅನುದಾನವನ್ನು 3054–13ನೇ ಹಣಕಾಸು ಯೋಜನೆಯಡಿಯಲ್ಲಿ ಕ್ಷೇತ್ರದಲ್ಲಿನ ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆಗಾಗಿ ನಿಗದಿಪಡಿಸಿ ಬಿಡುಗಡೆ ಗೊಂಡಿರುತ್ತದೆ.

ಇ) ಮೇಲೆ ವಿವರಿಸಿದಂತೆ ಬಿಡುಗಡೆಯಾಗಿರುವ ಅನುದಾನವು ಪ್ರತಿ ಕಿ.ಮೀ.ಗೆ ಸರಾಸರಿ ರೂ. 30,000,00 ಗಳಷ್ಟು ಇದ್ದು, ಇದರಡಿ ರಸ್ತೆಗಳ ಸಮರ್ಪಕ ನಿರ್ವಹಣೆ ಮಾಡಲಾಗುತ್ತಿದೆ. ಲಭ್ಯವಿರುವ ಅನುದಾನದಡಿಯಲ್ಲಿ ರಸ್ತೆಗಳನ್ನು ನಿರ್ವಹಿಸಲಾಗುತ್ತಿದೆ.

ಮೀನುಗಾರಿಕೆ

326 (574) ಶ್ರೀ ರುದ್ರೇಶಗೌಡ ವೈ.ಎನ್. (ಬೇಲೂರು) :– ಮಾನ್ಯ ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬೇಲೂರಿನಲ್ಲಿರುವ ಯಗಚಿ ಜಲಾಶಯದಲ್ಲಿ 2010–11 ಮತ್ತು 2011–12ನೇ ಸಾಲಿನಲ್ಲಿ ಮೀನು ಪಾಶುವಾರು ಹಕ್ಕನ್ನು ಯಾರಿಗೆ ನೀಡಲಾಗಿದೆ ;